

ನಾವು ವೋಟ್ ಬ್ಯಾಂಕ್!

ರಾಜ್ಯದ ಒಟ್ಟು ಜನಸಂಖ್ಯೆಯ ಸರಿಸುಮಾರು ಅರ್ಧದಷ್ಟು ಹೆಣ್ಣುಮಕ್ಕಳೇ ಇದ್ದಾರೆ. ನಾಲ್ಕೂವರೆ ಕೋಟಿ ಮತದಾರರಲ್ಲೂ ಎರಡೂ ಕಾಲು ಕೋಟಿ (ಅರ್ಧದಷ್ಟು) ಮಹಿಳೆಯರೇ ಇದ್ದಾರೆ. ಹಾಗಿದ್ದರೆ 224 ಸದಸ್ಯಬಲದ ಕರ್ನಾಟಕ ವಿಧಾನ ಸಭೆಯಲ್ಲಿ ಎಷ್ಟು ಮಹಿಳೆಯರು ಸದಸ್ಯರಾಗಬೇಕು?

–ಹೀಗೊಂದು ಸರಳ ಪ್ರಶ್ನೆ ಕೇಳಿದರೆ ಅಂಕಗಣಿತ ಗೊತ್ತಿರುವ ಯಾರೇ ಆದರೂ ಹೇಳುವುದು '112 ಹೆಣ್ಣು ಮಕ್ಕಳಾದರೂ ಸದಸ್ಯರಾಗಬೇಕು' ಎನ್ನುವ ಉತ್ತರ. ಆದರೆ ಹಾಗಾಗುತ್ತಿಲ್ಲ. 112 ಹೋಗಲಿ, ಒಂದೈವತ್ತು ಜನ ಮಹಿಳೆಯರಾದರೂ ವಿಧಾನಸಭೆಯ ಸದಸ್ಯರಾಗಿ ಆಯ್ಕೆ ಆಗಲು ಸಾಧ್ಯವಿದೆಯೆ? ಹೋಗಲಿ, ಇಪ್ಪತ್ತು ಮಹಿಳೆಯರಾದರೂ ಶಾಸಕಿಯರಾಗುತ್ತಾರೆಯೆ?

'ಈಗಿನ ಪರಿಸ್ಥಿತಿಯೇ ಮುಂದುವರಿದರೆ ಇನ್ನು ನೂರು ವರ್ಷಗಳಾದರೂ ಸಾಧ್ಯವಿಲ್ಲ' ಎನ್ನುವುದು ಎಲ್ಲರೂ ನೀಡುತ್ತಿರುವ ಉತ್ತರ.

ಈ ಸಲ ಏನಾಗಿದೆ ನೋಡಿ: ಶತಮಾನಗಳ ಇತಿಹಾಸ ಇರುವ ಕಾಂಗ್ರೆಸ್ ಪಕ್ಷದ ಸಂಭಾವ್ಯ ಅಭ್ಯರ್ಥಿಗಳ ಪಟ್ಟಿಯೊಂದನ್ನು ಕೆಪಿಸಿಸಿ ಮತ್ತು ವಿವಿಧ ಉಪಸಮಿತಿಗಳು ತಯಾರಿಸಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಗೆ ಕಳುಹಿಸಿಕೊಟ್ಟಿತು. ಬೆನ್ನಲ್ಲೇ ದೆಹಲಿಗೆ ದೌಡಾಯಿಸಿದ ಕಾಂಗ್ರೆಸ್ಸಿನ ಮಹಿಳಾ ನಾಯಕಿಯರ ದಂಡು 'ಈ ಪಟ್ಟಿಯಲ್ಲಿ ಮಹಿಳೆಯರಿಗೆ ಅನ್ಯಾಯವಾಗಿದೆ' ಎಂದು ದೊಡ್ಡ ಧ್ವನಿಯಲ್ಲಿ ಹೇಳಿತು. ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿಯವರ ಮನೆ ಮುಂದೆಯೇ ಧರಣಿ ನಡೆಸಿತು. ಸೋನಿಯಾ ಗಾಂಧಿಯವರಿಗೂ ಅದು ಸರಿ ಅನ್ನಿಸಿತು. 'ಪಟ್ಟಿಯನ್ನು ಸರಿ ಮಾಡಿ, ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯ ನೀಡಿ' ಎಂದು ಪಕ್ಷದ ನಾಯಕರಿಗೆ ಸೂಚನೆ ಕೊಟ್ಟು ಅವರು ಅಮೆರಿಕದ ವಿಮಾನ ಹತ್ತಿದರು. ಅವರು ವಾಪಸು ಬರುವುದರೊಳಗೆ ಇಲ್ಲಿ ಮತ್ತೊಂದು ಪಟ್ಟಿ ತಯಾರಾಗಿ, ಅದು ಬಿಡುಗಡೆಯೂ ಆಗಿದೆ. ಅಲ್ಲಿ 224 ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಸಿಕ್ಕಿರುವುದು 13 ಕ್ಷೇತ್ರಗಳಲ್ಲಿ ಮಾತ್ರ ಟಿಕೆಟ್!

'ಮಹಿಳೆಯನ್ನು ದೇವತೆ ಎಂದು ತಿಳಿದು ಪೂಜಿಸುವ ಸಂಸ್ಕೃತಿಯ' ಬಗ್ಗೆ ಪದೇ ಪದೇ ಮಾತನಾಡುವ ಭಾರತೀಯ ಜನತಾ ಪಕ್ಷವೂ ಕಾಂಗ್ರೆಸ್‌ಗಿಂತ ಭಿನ್ನವಲ್ಲ. ಅವರೂ ಮಹಿಳೆಯರಿಗೆ ನೀಡಿರುವ ಟಿಕೆಟ್‌ಗಳ ಸಂಖ್ಯೆ ಕೇವಲ ಹತ್ತು! ರಾಜ್ಯದ ಇನ್ನೊಂದು ಪ್ರಮುಖ ಪಕ್ಷ ಜಾತ್ಯತೀತ ಜನತಾ ದಳ. ತೆನೆ ಹೊತ್ತ ಮಹಿಳೆಯೇ ಅವರ ಗುರುತು. ಆದರೆ 'ಮಹಿಳೆ ಬಿಸಿಲಲ್ಲಿ ಕೇವಲ ತೆನೆ ಹೊತ್ತು ನಿಂತರೆ ಸಾಕು' ಎಂದೋ ಏನೋ, ಜೆಡಿಎಸ್ 13 ಟಿಕೆಟ್‌ಗಳನ್ನು ಮಹಿಳೆಯರಿಗೆ ನೀಡಿದೆ. ಇನ್ನು ಮಹಿಳೆಯರ ಬಗ್ಗೆ ವಿಶೇಷ ಕಾಳಜಿ ಪ್ರಕಟಿಸುವ ಬಿ.ಎಸ್.ಯಡಿಯೂರಪ್ಪನವರ ಕರ್ನಾಟಕ ಜನತಾ ಪಕ್ಷ ಕೂಡಾ ಕೊಟ್ಟದ್ದು ಹದಿಮೂರೇ ಟಿಕೆಟ್. ಸಿನಿಮಾ ಹೀರೋಯಿನ್‌ಗಳ ವಿಶೇಷ ಆಕರ್ಷಣೆಯ ಬಿಎಸ್‌ಆರ್ ಪಕ್ಷವಾದರೂ ಹೆಚ್ಚು ಸೀಟುಗಳನ್ನು ನೀಡಿದೆಯೇ ಅಂದರೆ, ಅದೂ 11ನ್ನು ದಾಟಿಲ್ಲ! ಯಾವ ಪಕ್ಷವೂ ಮಹಿಳೆಯರಿಗೆ ಕೊಟ್ಟಿರುವ ಟಿಕೆಟ್ ಪ್ರಾತಿನಿಧ್ಯ ಶೇ.6ನ್ನು ದಾಟಿಲ್ಲ!

ಒಟ್ಟಾರೆ ಎಲ್ಲ ಪಕ್ಷಗಳಲ್ಲೂ ಮಹಿಳೆ ಎಂದರೆ 'ವೋಟ್ ಬ್ಯಾಂಕ್' ಮಾತ್ರ. ಅದರಿಂದ ಸಿಗುವ ಅಧಿಕಾರದ ಸುಖ ಉಣ್ಣಲು ಪುರುಷರು ಸಾಲುಗಟ್ಟಿ ನಿಂತಿದ್ದಾರೆ. 'ಮತ ಹಾಕಿಸಲು, ಪಕ್ಷಕ್ಕೆ ಪ್ರಚಾರ ಮಾಡಲು ನಾವು ಬೇಕೇ ಬೇಕು. ಟಿಕೆಟ್ ಕೇಳಿದರೆ ಕಡೆಗಣ್ಣಿನಲ್ಲಿ ನೋಡಿ ನಕ್ಕು ಬಿಡುತ್ತಾರೆ' ಎನ್ನುವುದು ಎಲ್ಲ ರಾಜಕೀಯ ಪಕ್ಷಗಳ ಮಹಿಳಾ ಪದಾಧಿಕಾರಿಗಳು ಸಾಮಾನ್ಯ ಅಳಲು.

ಮಹಿಳಾ ಸಮಾನತೆಯ ಬಗ್ಗೆ ಸೈದ್ಧಾಂತಿಕ ಬದ್ಧತೆ ಹೊಂದಿರುವ ನಾಯಕರು ಇರುವ ಎಡಪಕ್ಷಗಳೂ ಚುನಾವಣಾ ರಾಜಕೀಯದಲ್ಲಿ ಮಹಿಳೆಯರನ್ನು ಮುಂದೊತ್ತುವಲ್ಲಿ ವಿಫಲವಾಗಿವೆ. ಈ ಸಲದ ಕರ್ನಾಟಕ ವಿಧಾನಸಭಾ ಚುನಾವಣೆಗೆ ಸಿಪಿಐ 8 ಅಭ್ಯರ್ಥಿಗಳನ್ನು ನಿಲ್ಲಿಸಿದ್ದು ಅವರಲ್ಲಿ ಒಬ್ಬರೂ ಮಹಿಳೆಯರಿಲ್ಲ. ಹಾಗೆಯೇ ಸಿಪಿಎಂ 16 ಅಭ್ಯರ್ಥಿಗಳನ್ನು ನಿಲ್ಲಿಸಿದ್ದು ಅದರಲ್ಲಿ ಒಬ್ಬ ಮಹಿಳೆ ಮಾತ್ರ ಇದ್ದಾರೆ.

### ಇತಿಹಾಸದ ನೋಟ

ಕರ್ನಾಟಕ ವಿಧಾನಸಭೆಯ ಇತಿಹಾಸದತ್ತ ಕಣ್ಣು ಹಾಯಿಸಿದರೆ ಮಹಿಳೆಯರಿಗೆ ಸಂಬಂಧಿಸಿ ಹಲವು ಕುತೂಹಲಕರ ಸಂಗತಿಗಳು ಗಮನಕ್ಕೆ ಬರುತ್ತವೆ: 1947ರಿಂದ 2013ರವರೆಗೆ ಕರ್ನಾಟಕಕ್ಕೆ ಒಟ್ಟು 21 ಮುಖ್ಯಮಂತ್ರಿಗಳಾಗಿದ್ದಾರೆ. ಅವರಲ್ಲಿ ಕೆಲವರು 2–3 ಬಾರಿ ಆ ಹುದ್ದೆ ಅಲಂಕರಿಸಿದ್ದಿದೆ. ಆದರೆ ಒಬ್ಬ ಮಹಿಳೆ ಯಾವತ್ತೂ ಈ ರಾಜ್ಯದ ಮುಖ್ಯಮಂತ್ರಿ ಆಗಲಿಲ್ಲ. ಆ ಹುದ್ದೆಯ ಸನಿಹಕ್ಕೂ ಬರಲಾಗಲಿಲ್ಲ. ಉಪಮುಖ್ಯಮಂತ್ರಿ ಹುದ್ದೆಯೂ ಲಭಿಸಿಲ್ಲ. ಅದೂ ಹೋಗಲಿ ಅಂದರೆ, ಮಂತ್ರಿ ಮಂಡಲದ ಅತ್ಯಂತ ಪ್ರಭಾವಶಾಲಿ ಖಾತೆಯಾಗಿರುವ ಗೃಹ ಖಾತೆಯನ್ನೂ ಈವರೆಗೆ ಒಬ್ಬ ಮಹಿಳೆಗೆ ನೀಡಿಲ್ಲ.

ವಿಧಾನಸಭೆಯ ಸ್ಪೀಕರ್ ಅಥವಾ ವಿಧಾನ ಪರಿಷತ್ತಿನ ಸಭಾಪತಿಯ ಹುದ್ದೆಯೂ ಬಹಳ ಮಹತ್ವದ್ದು. ಒಟ್ಟು 18